ಬಿಟ್ಟರೆ ನನಗಾದರೂ ಏನು ಮಾಡಲು ಸಾಧ್ಯವಿತ್ತು?' ಎಂದು ಬಹಳಷ್ಟು ಬಾರಿ ಕಪಿಲೆ ತನ್ನನ್ನೇ ಪ್ರಶ್ನಿಸಿಕೊಂಡಿದ್ದಳು. ಕ್ರಮೇಣ 'ಆಕೆ' ಮತ್ತು ಕಪಿಲೆಯ ನಡುವೆ ಮಾತುಗಳು ಬಂಧಿಯಾಗಿ, ಮೌನ ಸ್ಥಿರವಾಗಲು ಸ್ಪರ್ಶಗಳೇ ಮಾತುಗಳನ್ನು ಕಟ್ಟಿ ಅರ್ಥವನ್ನು ಹೊಮ್ಮಿಸುತ್ತಿದ್ದವು.

'ಕಣ್ಣಿಗೆ ಕಣ್ಣು ತಾಕಿಸಿ, ಉಸಿರ ಮೇಲೆ ಉಸಿರು, ನಿಟ್ಟುಸಿರು ಬಿಡುವುದಲ್ಲದೆ ಇನ್ನೇನನ್ನೂ ಮಾಡಲಾರದಾದೆನಲ್ಲ' ನೆನೆದು, ಕಪಿಲೆ ನಿಟ್ಟುಸಿರಿಟ್ಟಳು.

***

'ಆಕೆ'ಯ ಸ್ವರಕ್ಕೆ ಅಮ್ಮನ ಮಮಕಾರದ ಬಿಸುಪಿತ್ತು. ಅಮ್ಮನೇ ಆಗಿದ್ದಳು ನನಗೆ ಆಕೆ. ಹೆತ್ತವಳ ನೆನಪು ತೀವ್ರವಾಗಿ ಕಾಡಲು, ಆಕೆಯ ಮೈಕೈಯನ್ನು ಮೂಸಿ, ನೆಕ್ಕಿ ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದೆ ಎಂಬ ಕನವರಿಕೆಗಳಲ್ಲಿ ಕಪಿಲೆ ಮುಳುಗಿ ಹೋದಳು.

ಸಂಗೀತವನ್ನು ಇಷ್ಟಪಡುತ್ತಿದ್ದಳು. ಯಾವುದೇ ಕೆಲಸವನ್ನು ಮಾಡುವಾಗಲೂ ಹಾಡನ್ನು ಗುನುಗುತ್ತಲೇ ಇರುತ್ತಿದ್ದಳು. ಹಾಲನ್ನು ಕರೆಯುವಾಗಲೂ ಕೂಡ ಹಾಡು. ಸುರ್ರನೆ… ಪುರ್ರನೆ ಕಪಿಲೆಯ ಕೆಚ್ಚಲಿನಿಂದ ಹಾಲು ತಂಬಿಗೆಗೆ ಬೀಳುವಾಗ ಹೊಮ್ಮುವ ನಾದವೇ ಆಕೆಗೆ ಶ್ರುತಿಯಾಗಿ, ಆ ಶ್ರುತಿಗೆ ಸರಿಯಾಗಿ ಹಾಡನ್ನೂ ಹಾಡುತ್ತಿದ್ದಳು.

ಅಂದು ಸಂಜೆಯ ಗೋಧೂಳಿ ಮುಹೂರ್ತದಲ್ಲಿ ಹಾಲನ್ನು ಕರೆವಾಗ ಆಕೆಯ ಕೈ ನೆಕ್ಕಿದ ಕಪಿಲೆಯನ್ನು ನೋಡಿದ ಆಕೆ ವಿಷಾದದ ನಗೆಯನ್ನು ನಕ್ಕು, 'ಪಾಪಿ ಬಲ್ಲನೆ ಪರರ ಸುಖ ದುಃಖವ/ಕೋಪಿ ಬಲ್ಲನೆ ಶಾಂತ ಸುಗುಣದ ಘನವ/ಬಾಳೆ ಬಲ್ಲುದೆ ಮರಳಿ ಫಲವಾಗೊ ಸುದ್ದಿಯನು/ಸೂಳೆ ಬಲ್ಲಳೆ ಗೆಳೆಯಗಿಹ ಬಡತನ/ಕೇಳ ಬಲ್ಲನೆ ಕಿವುಡನೇಕಾಂತ ಮಾತುಗಳ/ಹೇಳ ಬಲ್ಲನೆ ಮೂಕ ಕನಸು ಕಂಡುದನು' ಎಂದು ಸುಶ್ರಾವ್ಯವಾಗಿ ಹಾಡುತ್ತಿದ್ದರೆ, ಕಪಿಲೆ ಅಷ್ಟೂ ಹಾಲನ್ನು ಕೆಚ್ಚಲಿಂದ ಇಳಿಸಿದ್ದಳು. ಹೆಚ್ಚೇ ಹಾಲು ತಂಬಿಗೆಯನ್ನು ತುಂಬುವುದನ್ನು ಕಂಡ ಆಕೆಗೆ ಆಶ್ಚರ್ಯವಾಗಿತ್ತು.

'ಹೂಂ ಆಕೆ ಇರಬೇಕಿತ್ತು' ಅಂತ ಮಾತ್ರ ಕಪಿಲೆಯ ಮನಸ್ಸು ಆಕೆಗಾಗಿ ಮಿಡಿಯುತ್ತಿತ್ತು.

'ಮಾತೃ ಹೃದಯಿಯೆಂದು ಕರೆಯಿಸಿಕೊಳ್ಳುವ ಕಠಿಣ ಹೃದಯಿಗಳು ನನ್ನನ್ನು, ನನ್ನ ಬಂಧುಗಳನ್ನು ಮಾರುವುದಾಗಿ ತೀರ್ಮಾನಿಸಿದ್ದನ್ನು ಸಂಜೆ ಹಾಲು ಕರೆಯಲು ಬಂದಾಗ 'ಆಕೆ' ಹೇಳಿದ್ದನ್ನು ಕೇಳಿ, ಎದೆ ಧಸಕ್ಕೆಂದಿತ್ತು. ನಾವುಳಿದಿರುವ ಕೊಟ್ಟಿಗೆಯನ್ನು ಕೆಡವಿ, ಅಲ್ಲಿ ದೊಡ್ಡದೊಂದು ಕಟ್ಟಡವನ್ನು ಎಬ್ಬಿಸುತ್ತಾರಂತೆ. ವ್ಯವಹಾರ ನಿಪುಣ ನಿಪುಣೆಯರದ್ದೇ ಎಲ್ಲ ಕಾರುಬಾರು' ಎಂದೂ ಹೇಳಿದ್ದಳು.

'ಹಾಗೇನಾದರೂ ಆದರೆ ಏನು ಮಾಡುವುದು?' ಎಂಬ ಪ್ರಶ್ನೆಯು ಕಪಿಲೆಯನ್ನು ಒಂದೇ ಸಮ ಕೊರೆಯುತ್ತಿತ್ತು.

***



ಗುಡಿಯ ಬಾಗಿಲಿಗೆ ಮುಖವಿಟ್ಟರೆ ಸಾಕು ಅರ್ಚಕರು ಕುಡಿಯಲು ನೀರು, ತಿನ್ನಲು ಏನನ್ನಾದರೂ ಕಪಿಲೆಗೆ ಕೊಡುತ್ತಿದ್ದರು. ಎಷ್ಟೆಂದರೂ ಕಪಿಲೆ ಆಕೆಯ ಮನೆಯವಳು.

ಅಂದು ಆಕೆಯ ಮನೆಯಲ್ಲಿ ಏನೋ ಗಡಿಬಿಡಿ. ಮೇಯಲು ಹೋದ ಕಪಿಲೆ ಮನೆಯ ಎದುರಿನ ಹಿತ್ತಲಿಗೆ ಬಂದವಳು, ಮಂದಾರ ಹೂವಿನ ಮರದ ಕೆಳಗೆ ನಿಂತು ಮನೆಯನ್ನೇ ನೋಡುತ್ತಿದ್ದಳು. ಮಂದಾರ ಹೂವನ್ನು ಕೊಯ್ಯಲು ಅದೇ ಮನೆಯ ಮಕ್ಕಳಿಬ್ಬರು ಮರವೇರಿದ್ದರು. ಕಪಿಲೆಯನ್ನು ಅತ್ತಕಡೆ ಹೋಗೆಂದು, 'ಹೆಂಯೀ… ಹೆಂಯೀ…' ಎಂದು ಕೂಗುತ್ತಿದ್ದರು.

ಅಲ್ಲಿಂದ ಹೊರಟ ಕಪಿಲೆ ತುಸು ದೂರ ಬಂದಿರಬೇಕಷ್ಟೆ, ಮನೆಯಲ್ಲಿ ಎಂತಹದ್ದೋ ಅಸ್ತವ್ಯಸ್ತ ಗಲಿಬಿಲಿಯು ಕಾಣಿಸಿ, ಕೆಟ್ಟದ್ದರ ಮುನ್ಸೂಚನೆಯ ವಾಸನೆ ಅವಳ ಮೂಗಿಗೆ ಬಡಿಯಿತು. ಏರು ಧ್ವನಿಯ ಚೀರಾಟ, ಕೂಗಾಟ, ಅಳು ಕಿವಿಗಪ್ಪಳಿಸಿದಾಗ ಆಗಬಾರದ ಘಟನೆಗಳೇನೋ ಆಗಿವೆ ಎಂದು ಅವಳ ಮನಸ್ಸು ಹೇಳಿತು. ದೇವಿ ಶಂಕರಿಯನ್ನು ಪ್ರಾರ್ಥಿಸುವುದು ಬಿಟ್ಟರೆ ಕಪಿಲೆಯಿಂದ ಬೇರೇನೂ ಮಾಡಲಾಗುತ್ತಿರಲಿಲ್ಲ.

ಎದುರಿನ ಹಿತ್ತಲಿನಲ್ಲಿ ಅತ್ತ ಇತ್ತ ನಡೆಯುತ್ತಾ, ಸುತ್ತು ಹಾಕುತ್ತಾ, 'ಅಮ್ಮಾ… ಅಮ್ಮಾ…' ಎಂದು ಒಂದೇ ಸಮ ಕಪಿಲೆ ಕೂಗುತ್ತಿದ್ದಳು. ನಿತ್ಯವೂ ಶಂಕರಿ ಗುಡಿಗೆ ಹೋಗಿ 'ಆಕೆ'ಗಾಗಿ ಮೂಕವೇದನೆಯ ಪ್ರಾರ್ಥನೆ ಮಾಡುತ್ತಿದ್ದ ಕಪಿಲೆ, ಇಂದೂ ನಿಂತಲ್ಲಿಂದಲೇ ಶಂಕರಿಯನ್ನು ಮನಸಾರೆ ಪ್ರಾರ್ಥಿಸಿಕೊಂಡಳು.

ಪ್ರಾರ್ಥನೆ ಮಾತ್ರ ಅವಳಿಂದ ಮಾಡಲು ಸಾಧ್ಯವಿತ್ತು. ಯಾಕೋ ಕಪಿಲೆಯ ಮನಸ್ಸು ಹದ ತಪ್ಪಿತ್ತು. ಏನನ್ನೂ ಸೇವಿಸದಾದಳು. ಮರುದಿನ ಒಲ್ಲದ ಮನಸ್ಸಿನಿಂದ ಮೇಯಲು ಹೋದವಳಿಗೆ ಹೆಚ್ಚು ಮೇಯಲಾಗದೆ ಓಡಿ ಬಂದಿದ್ದಳು. ಕಾರಣ ವರ್ಷಕ್ಕೊಮ್ಮೆ ಆಕೆಯ ಮನೆಗೆ ಬರುವ ದೈವಕ್ಕೆ ಕಪಿಲೆಯ ಹಾಲು ನೈವೇದ್ಯವಾಗಬೇಕಿತ್ತು.

'ನನ್ನ ಕಿಂಚಿತ್ತು ಸೇವೆಯ ಪುಣ್ಯ 'ಆಕೆ'ಗೆ ಸಿಗಲಿ. ಹಾಳಾಗದಿರಲಿ ಆಕೆಯ ಮನೆಮನ' ಕಪಿಲೆ ಆರ್ದ್ರಳಾಗಿ, ದೇವಿ ಶಂಕರಿಯನ್ನು ಎದುರಿನ ಹಿತ್ತಲಿನಲ್ಲಿ ಹೆಜ್ಜೆ ಹಾಕುತ್ತಾ ಬರುವಾಗ ಪ್ರಾರ್ಥಿಸಿಕೊಂಡಳು. ಅಷ್ಟರಲ್ಲಿ ಆಕೆ ತನ್ನ ಒಡೆಯನ ಜೊತೆಗೆ ಮನೆಯ ಹೊಸ್ತಿಲನ್ನು ದಾಟಿದಳು. ಕಾರು ಮನೆಯ ಗೇಟಿನ ಮುಂದೆ ಬಂದು ನಿಂತಿತ್ತು. 'ಆಕೆ' ಹೊಸ್ತಿಲು ದಾಟಿ ಅಂಗಳಕ್ಕಿಳಿದಳು. ಕಣ್ಣು ತುಂಬಾ ಮನೆಯನ್ನೊಮ್ಮೆ ತುಂಬಿಸಿಕೊಂಡು ಗೇಟನ್ನು ದೂಡಿದಳು. ಆಕೆಯದ್ದೇ ಆರ್ತನಾದವೇನೋ ಎನ್ನುವಂತೆ, ಜಡಗೊಂಡ ಗೇಟು,'ಕಿರ್ರನೆ' ಸದ್ದನ್ನು ಮಾಡುತ್ತಾ ತೆರೆದುಕೊಂಡಿತು.

ಕಾರೊಳಗೆ ಒಡೆಯ ಕೂತ ಬೆನ್ನಲ್ಲೇ 'ಆಕೆ'ಯೂ ಕೂರಲು ಬಗ್ಗಿದಾಗ, ಹಿತ್ತಲಿನಿಂದ ತರಚು ಗಾಯಗಳಿಗೂ ಲೆಕ್ಕಿಸದೆ, ಓಡುತ್ತಾ ಹೋದ ಕಪಿಲೆ, 'ಅಮ್ಮಾsss' ಎಂದು ಕೂಗಿದಳು. ಕಪಿಲೆಯನ್ನು ಬರಸೆಳೆದಪ್ಪಿಕೊಂಡ 'ಆಕೆ' ಮೂಕಿಯಾದಳು. ಮಾತಿಲ್ಲದೆ ಸ್ಪರ್ಶದೊಲುಮೆಯ ಭಾವ ಇಬ್ಬರಲ್ಲೂ ಹರಿಯುತ್ತಲೇ ಹೋಯಿತು. ಆಕೆಯ ಹೊಟ್ಟೆಗೆ ಮುಖವುಜ್ಜಿ, ಕೈಗಳನ್ನು ನೆಕ್ಕಿ, ಕಪಿಲೆ ಮನಸಾರೆ ಮುದ್ದಿಸಿದಳು.

ಬಿಗಿಗೊಂಡ ಗಂಟಲಿನಿಂದ ಹೊರಟ, 'ಅಮ್ಮಾ…' ಕರೆಗೆ 'ಆಕೆ' ಕತ್ತೆತ್ತಿದಳು. ಎದುರಲ್ಲಿ ಶಂಕರಿ ದೇವಿ ಗುಡಿಯ ಅರ್ಚಕರು ಕೊಡಿ ಬಾಳೆಲೆಯಲ್ಲಿ ಪ್ರಸಾದವನ್ನು ಹಿಡಿದು ನಿಂತಿದ್ದರು.

'ಶಂಕರಿ ದೇವಿಯು ನಿಮ್ಮ ಸಕಲ ಕಷ್ಟಗಳನ್ನು ದೂರ ಮಾಡಿ, ಅಭೀಷ್ಟಗಳನ್ನು ನೆರವೇರಿಸಲಿ ಅಮ್ಮಾ' ಹೇಳಿ, ಹರಸಿದ ಅರ್ಚಕರ ಕಂಠ ಗದ್ಗದಗೊಂಡಿತು. ಪ್ರಸಾದವನ್ನು ಸ್ವೀಕರಿಸಿದ ಆಕೆಯ ಕೈಗಳು, ಸರಕ್ಕನೆ ಕಪಿಲೆಯ ಕೊರಳನ್ನು ಹಿಡಿದವು. ದರದರನೆ ಕಪಿಲೆಯನ್ನು ಎಳೆದುಕೊಂಡು ಹೋದ 'ಆಕೆ', ಅರ್ಚಕರ ಕೈಗೆ ಒಪ್ಪಿಸಿ,'ಇವಳ ಖರ್ಚುವೆಚ್ಚ ನನ್ನದು. ಶಂಕರಿ ದೇವಿಗೆ ಬಿಟ್ಟಿದ್ದೇನೆ' ಹೇಳಿ, ಒತ್ತರಿಸಿ ಬರುತ್ತಿದ್ದ ದುಃಖವನ್ನು ಸೆರಗಲ್ಲಿ ಕಟ್ಟಿ ಹಾಕಿದಳು. ಮಧ್ಯಾಹ್ನದ ಹೆಣ ಭಾರ ರಣಬಿಸಿಲಿಗೆ ಅಂಬಾಸಿಡರ್ ಕಾರು ದೂಳನ್ನು ಎಬ್ಬಿಸುತ್ತ ಹೋಯಿತು. ರಸ್ತೆಯ ಉಬ್ಬನ್ನೇರಿ ಇಳಿಯುವವರೆಗೂ ಕಪಿಲೆ ಕಾರನ್ನು ನೋಡುತ್ತಲೇ ಇದ್ದಳು. ಕಪಿಲೆಯ ಕೊರಳಿಗೆ 'ಆಕೆ' ಕಟ್ಟಿದ ಮಣಿಸರವು ಅರ್ಚಕರ ಕೈಯನ್ನು ಸ್ಪರ್ಶಿಸಿತು. ಹಿಡಿದ ಕಾರ್ಯ ಪೂರೈಸಿದ ಖುಷಿಯಲ್ಲಿ ಮನೆಮಂದಿ ಹಲವು ಭಾವಗಳೊಂದಿಗೆ ಬೆಸೆದುಕೊಂಡರು.

'ದೇವಿ ಶಂಕರಿ, ಕಪಿಲೆ ಮತ್ತು ನಾನು. ನಾವು ಬರೀ ಮೂವರಷ್ಟೇ ಇನ್ನು. ತಾಯಿ, ನಿನ್ನ ಲೀಲೆಯೇ! ಬಾ ಕಪಿಲೆ' ಹೇಳುತ್ತಾ, ಕಪಿಲೆಯ ಕೊರಳಿಗೆ ಕೈ ಹಾಕಿ ಶಂಕರಿ ಗುಡಿಯತ್ತ ಅರ್ಚಕರು ನಡೆದರು.

'ಪಾಪಿ ಬಲ್ಲನೆ ಪರರ ಸುಖ ದುಃಖವ/ಕೋಪಿ ಬಲ್ಲನೆ ಶಾಂತ ಸುಗುಣದ ಘನವ/ ಹೇನು ಬಲ್ಲುದೆ ಮುಡಿದ ಹೂವಿನ ಪರಿಮಳವ/ಶ್ವಾನ ಬಲ್ಲುದೆ ರಾಗ ಭೇದಂಗಳ/ಮೀನು ಬಲ್ಲುದೆ ನೀರು ಸೌಳು ಸ್ವಾದೆಂಬುದನು/ ಹೀನ ಬಲ್ಲನೆ ಸುಗುಣ ದುರ್ಗುಣವನು' ಆಕೆ ಹಾಡುತ್ತಿದ್ದ ಹಾಡು ಕಪಿಲೆಯ ಮನಸ್ಸಿನ ಮೂಲೆಯಲ್ಲಿ ಕುಳಿತು ಹಾಡಲು ತೊಡಗಿತು.

ಪ್ರತಿಕ್ರಿಯಿಸಿ:feedback@sudha.co.in